# ಕಂಗನಾ ರನೋಟ್ ನಾಗಾಲೋಟ

ಕಂಗನಾ ನಟಿಸಿದ ಹೊಸ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. 'ಮೆಂಟಲ್ ಹೈ ಕ್ಯಾ' ಚಿತ್ರದಲ್ಲಿ ಕಂಗನಾ ಎಂದಿನಂತೆ ಲೀಲಾಜಾಲವಾಗಿ ನಟಿಸಿದ್ದಾಳಂತೆ. ಈ ಚಿತ್ರದ ಹೆಸರನ್ನು 'ಸೆಂಟಿಮೆಂಟಲ್ ಹೈ ಕ್ಯಾ' ಎಂದು ಬದಲಿಸಿದ ಸುದ್ದಿಯೂ ಬಂದಿದೆ. ಬಾಲಿವುಡ್‌ನ ಫ್ಯಾಷನಬಲ್ ನಟಿ ಎನ್ನುವ ಹೆಸರನ್ನು ಈಗಲೂ ಉಳಿಸಿಕೊಂಡಿರುವ ಕಂಗನಾ, ನೇರ ಮಾತುಗಳಿಗೂ ಹೆಸರುವಾಸಿ.

ಈ ಮಧ್ಯೆ ತಮಿಳಿನಲ್ಲೂ ಕಂಗನಾ ನಟಿಸಿರುವ 'ತಲೈವಿ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಜುಲೈ, ಆಗಸ್ಟ್, ಸೆಪ್ಟೆಂಬರ್ ಹೀಗೆ ಮೂರು ತಿಂಗಳಲ್ಲೂ ಈಕೆಯ ಹೊಸ ಸಿನಿಮಾಗಳು ಸಾಲಾಗಿ ತೆರೆ ಕಾಣಲಿವೆ. 'ಇಮಾಲಿ' ಮತ್ತು 'ಧಮಾಲ್ 2' ತೆರೆಗೆ ಬರಲಿರುವ ಇನ್ನೆರಡು ಚಿತ್ರಗಳು. ಈಗಾಗಲೇ ಮೂರು ರಾಷ್ಟ್ರಪ್ರಶಸ್ತಿಗಳನ್ನು ಬಗಲಿಗೆ ಹಾಕಿಕೊಂಡಿರುವ ಕಂಗನಾ, 'ಮೆಂಟಲ್...' ಚಿತ್ರದಲ್ಲೂ ಅತ್ಯುತ್ತಮ ಅಭಿನಯ ನೀಡಿದ್ದಾಳೆಂದು ಸುದ್ದಿ ಹಬ್ಬಿದೆ. ಮುಂದಿನ ವರ್ಷ ಬಿಡುಗಡೆಯ ದಿನಾಂಕ ಫಿಕ್ಸ್ ಆಗಿರುವ ಇನ್ನೆರಡು ಸಿನಿಮಾಗಳು ಈಕೆಯ ಕೈಯಲ್ಲಿದೆ. ಸದ್ಯಕ್ಕೆ ಬಾಲಿವುಡ್‌ನಲ್ಲಿ ಈಕೆಯದ್ದು ನಾಗಾಲೋಟ ಎನ್ನಬಹುದು. ಅದರಲ್ಲಿ 'ಪಂಗಾ' ಎನ್ನುವ ಸಿನಿಮಾ ಈಗಾಗಲೇ ಶೂಟಿಂಗ್‌ನ ಅಂತಿಮ ಹಂತಕ್ಕೆ ಬಂದಿದೆ. ಕಬಡ್ಡಿ ಆಟಗಾರ್ತಿಯೊಬ್ಬಳ ಜೀವನ ಆಧಾರಿತ ಕಥೆ ಇರುವ ಈ ಚಿತ್ರದಲ್ಲಿ ಕಂಗನಾ ಜೊತೆಗೆ ಜಸ್ಸಿ ಗಿಲ್, ರಿಚಾ ಚಡ್ಡಾ, ನೀನಾ ಗುಪ್ತಾ ಕೂಡಾ ನಟಿಸಿದ್ದಾರೆ.

—ಹನಿ




